ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1807
ಉತ್ತರಿಸುವ ಸಚಿವರು : ಮಾನ್ಯ ಕೈಮಗ್ಗ ಮತ್ತು ಜವಳಿ, ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಸಚಿವರು
ಉತ್ತರಿಸಬೇಕಾದ ದಿನಾಂಕ : 15-03-2022

ಕ್ರಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಕೈಮಗ್ಗ ಹೊಂದಿರುವ ಕುಟುಂಬಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)	2019-20 ನೇ ಸಾಲಿನ 4ನೇ ರಾಷ್ಟ್ರೀಯ ಕೈಮಗ್ಗ ಗಣತಿ ಪ್ರಕಾರ ರಾಜ್ಯದಲ್ಲಿ 25215 ಕೈಮಗ್ಗ ಕುಟುಂಬಗಳು ಇರುತ್ತವೆ. ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ**ದಲ್ಲಿ ಒದಗಿಸಿದೆ.
(ಆ)	ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಕೈಮಗ್ಗ ನಡೆಸುತ್ತಿರುವ ಕುಟುಂಬಗಳ ಸಂಖ್ಯೆ ಎಷ್ಟು;	ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಪ್ರಸ್ತುತ ಕೈಮಗ್ಗ ನಡೆಸುತ್ತಿರುವ ಕುಟುಂಬಗಳ ಸಂಖ್ಯೆ ವಿವರ ಈ ಕೆಳಕಂಡಂತಿರುತ್ತದೆ:- (see table below)
(ಇ)	ಈ ಕೈಮಗ್ಗಗಳನ್ನು ಹೊಂದಿರುವ ಕುಟುಂಬದವರಿಗೆ ಸರ್ಕಾರ ರೂಪಿಸಿರುವ ಸಹಾಯಕ ಯೋಜನೆಗಳು ಯಾವುವು;	ಕೈಮಗ್ಗ ನೇಕಾರರಿಗೆ ಸರ್ಕಾರವು ರೂಪಿಸಿರುವ ಯೋಜನೆಗಳ ವಿವರ ಈ ಕೆಳಕಂಡಂತಿರುತ್ತದೆ:- • ನೇಕಾರ್ ಸಮ್ಮಾನ್ ಯೋಜನೆ • ರಾಷ್ಟ್ರೀಯ ಕೈಮಗ್ಗ ದಿನಾಚರಣೆಯ ಆಚರಣೆಯಲ್ಲಿ ಕೈಮಗ್ಗ ನೇಕಾರರಿಗೆ ರಾಜ್ಯ ಮಟ್ಟದ ಪ್ರಶಸ್ತಿ • ಕೈಮಗ್ಗ ಉತ್ಪನ್ನಗಳಿಗೆ ಶೇ.20 ರಿಬೇಟ್ ಮಾರುಕಟ್ಟೆ ಸಹಾಯ • ಕೈಮಗ್ಗ ವಿಕಾಸ ಯೋಜನೆ • ಕೈಮಗ್ಗಗಳಿಗೆ ಮೋಟರೈಸ್ಡ್ ಜಕಾರ್ಡ್ ಒದಗಿಸುವುದು • ಕಚ್ಚಾ ನೂಲು ಖರೀದಿಗೆ ರೂ.15.00 ಪ್ರತಿ ಕೆ.ಜಿ ಗೆ ಸಹಾಯಧನ • ಮೃತ ನೇಕಾರರ ಅಂತ್ಯ ಸಂಸ್ಕಾರ ವೆಚ್ಚ ಮರುಪಾವತಿ • ಸಹಕಾರ ಸಂಘಗಳಿಗೆ ನಬಾರ್ಡ್ ಪುನರ್ ಧನದ ಬಡ್ಡಿ ಸಹಾಯಧನ ಹಾಗೂ ಶೇ.1 ಮತ್ತು ಶೇ.3 ರ ಬಡ್ಡಿ ಸಹಾಯಧನ • ಏಳಿಗೆ ನಿಧಿ ಯೋಜನೆಯಡಿ ಸರ್ಕಾರದ ಸಮಚಂದಾ ಹಾಗೂ ಏಳಿಗೆ ನಿಧಿ ಮೇಲಿನ ಬಡ್ಡಿ • ಉಣ್ಣೆ ವಲಯ ಪುನಃಶ್ಚೇತನ ಮತ್ತು ಬಲವರ್ಧನೆ ಯೋಜನೆಯಡಿ ಸಹಾಯಧನ • ಜಿಲ್ಲಾ ವಲಯ ಯೋಜನೆಗಳು

ಕ್ರಸಂ	ಜಿಲ್ಲೆಯ ಹೆಸರು	ಪ್ರಸ್ತುತ ಕೈಮಗ್ಗ ನಡೆಸುತ್ತಿರುವ ಕಟುಂಬಗಳ ಸಂಖ್ಯೆ
1	ಧಾರವಾಡ	342
2	ಗದಗ	1371
3	ಹಾವೇರಿ	1551
	ಒಟ್ಟು	**3264**

.... 2

(ಈ)	ಕೈಮಗ್ಗ ಹೊಂದಿರುವ ಕುಟುಂಬದವರಿಗೆ ಕಡಿಮೆ ಬಡ್ಡಿ ದರದಲ್ಲಿ ಬ್ಯಾಂಕ್ ಸಾಲ ನೀಡುವ ಪ್ರಸ್ತಾಪ ಸರ್ಕಾರದ ಮುಂದೆ ಇದೆಯೇ; ಇಲ್ಲದಿದ್ದಲ್ಲಿ ಕಾರಣಗಳೇನು?	ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಕಾರರಿಗೆ ಸಹಕಾರಿ ಬ್ಯಾಂಕ್‌ಗಳ ಮತ್ತು ಸಂಘಗಳ ಮೂಲಕ ಶೇಕಡ 1 ರ ಬಡ್ಡಿ ದರದಲ್ಲಿ ರೂ.2.00 ಲಕ್ಷಗಳವರೆಗೆ ಹಾಗೂ ಶೇ.3 ರ ಬಡ್ಡಿ ದರದಲ್ಲಿ ರೂ.2.00 ಲಕ್ಷಗಳಿಂದ ರೂ.5.00 ಲಕ್ಷಗಳವರೆಗೆ ಸಾಲ ಸೌಲಭ್ಯ ಒದಗಿಸಲಾಗುತ್ತಿದೆ.

ಸಂ: CI 104 JAKE 2022

(ಶಂಕರ ಬ ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಸಚಿವರು

ಅನುಬಂಧ

ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1807 ಕ್ಕೆ ಮಾಹಿತಿ

4ನೇ ರಾಷ್ಟ್ರೀಯ ಕೈಮಗ್ಗ ಗಣತಿ ಪ್ರಕಾರ ರಾಜ್ಯದಲ್ಲಿರುವ ಕೈಮಗ್ಗ ಕುಟುಂಬಗಳ ಸಂಖ್ಯೆ		
ಕ್ರ.ಸಂ	ಜಿಲ್ಲೆಯ ಹೆಸರು	ಕೈಮಗ್ಗ ಕುಟುಂಬಗಳ ಸಂಖ್ಯೆ
1	ಬಾಗಲಕೋಟೆ	6095
2	ಬೆಂಗಳೂರು ನಗರ	979
3	ಬೆಂಗಳೂರು ಗ್ರಾಮಾಂತರ	157
4	ಬೆಳಗಾವಿ	1197
5	ಬಳ್ಳಾರಿ	1126
6	ಬೀದರ್	573
7	ವಿಜಯಪುರ	698
8	ಚಾಮರಾಜನಗರ	736
9	ಚಿಕ್ಕಬಳ್ಳಾಪುರ	814
10	ಚಿಕ್ಕಮಗಳೂರು	152
11	ಚಿತ್ರದುರ್ಗ	3049
12	ದಕ್ಷಿಣಕನ್ನಡ	34
13	ದಾವಣಗೆರೆ	92
14	ಧಾರವಾಡ	368
15	ಗದಗ	1425
16	ಕಲಬುರಗಿ	358
17	ಹಾಸನ	334
18	ಹಾವೇರಿ	1821
19	ಕೊಡಗು	30
20	ಕೋಲಾರ	99
21	ಕೊಪ್ಪಳ	879
22	ಮಂಡ್ಯ	54
23	ಮೈಸೂರು	10
24	ರಾಯಚೂರು	15
25	ರಾಮನಗರ	63
26	ಶಿವಮೊಗ್ಗ	14
27	ತುಮಕೂರು	3475
28	ಉಡುಪಿ	37
29	ಉತ್ತರ ಕನ್ನಡ	23
30	ಯಾದಗಿರಿ	508
---	ಒಟ್ಟು	25215

ಅಪರ ನಿರ್ದೇಶಕರು
ಕೈಮಗ್ಗ ಮತ್ತು ಜವಳಿ